ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಮೇ 13, 2020**

# ಪತ್ರಿಕಾ ಪ್ರಕಟಣೆ

## ಮೇ 14 ರಂದು ರಾಜ್ಯ ಸಚಿವ ಸಂಪುಟ ಸಭೆ

**ಬೆಂಗಳೂರು, ಮೇ 13 ( ಕರ್ನಾಟಕ ವಾರ್ತೆ ) :**

ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಮೇ 14 ರಂದು ಸಂಜೆ 4–00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆಯಲಿದೆ.

ರಾಜ್ಯಕ್ಕೆ ಕೊರೊನಾ ಪ್ರವೇಶ ಕೊಟ್ಟ ನಂತರ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಹಿನ್ನೆಲೆಯಲ್ಲಿ ವಿಧಾನ ಸೌಧದ ಮೂರನೇ ಮಹಡಿಯಲ್ಲಿಯೇ ಇರುವ ಸಂಪುಟ ಸಭಾಂಗಣದಲ್ಲಿ ನಡೆಯುತ್ತಿದ್ದ ರಾಜ್ಯ ಸಚಿವ ಸಂಪುಟ ಸಭೆಗಳನ್ನು ಅಲ್ಲಿಯೇ ಇರುವ ಸಮ್ಮೇಳನ ಸಭಾಂಗಣದಲ್ಲಿ ನಡೆಸಲಾಗುತ್ತಿದೆ.

ಇದೀಗ ಮೇ 14 ರಂದು ಸಮ್ಮೇಳನ ಸಭಾಂಗಣದಲ್ಲಿ ನಿಗದಿಯಾಗಿರುವ ರಾಜ್ಯ ಸಂಪುಟ ಸಭೆಯು ಈ ಸ್ಥಳದಲ್ಲಿ ಸತತ ಐದನೇ ಬಾರಿಗೆ ನಡೆಯಲಿರುವ ಸಭೆಯಾಗಿದೆ.

*********

ಡಿ ಪಿ ಎಂ

## ಸಚಿವರ ಪ್ರವಾಸ

**ಬೆಂಗಳೂರು, ಮೇ 13 ( ಕರ್ನಾಟಕ ವಾರ್ತೆ ) :**

ವಸತಿ ಸಚಿವ ವಿ. ಸೋಮಣ್ಣ ಅವರು ಮೇ 22 ಮತ್ತು 23 ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಮೇ 23 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಪ್ರಕಟಣೆ ತಿಳಿಸಿದೆ.

## ಶಿಕ್ಷಣತಜ್ಞ ಡಾ.ಎಚ್.ನರಸಿಂಹಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಲೇಖನ ಸ್ಪರ್ಧೆ

**ಬೆಂಗಳೂರು, ಮೇ 13 ( ಕರ್ನಾಟಕ ವಾರ್ತೆ ) :**

ನಾಡುಕಂಡ ಶ್ರೇಷ್ಠ ಶಿಕ್ಷಣತಜ್ಞ, ಗಾಂಧಿವಾದಿ, ವಿಚಾರವಾದಿ, ವಿಜ್ಞಾನಿ ಹಾಗೂ ಸಮಾಜ ಸುಧಾರಕರಲ್ಲಿ ಅಗ್ರಗಣ್ಯರಾಗಿದ್ದ ಡಾ|| ಎಚ್.ನರಸಿಂಹಯ್ಯನವರ ಜನ್ಮಶತಮಾನೋತ್ಸವವನ್ನು ಇದೇ ಬರುವ ಜೂನ್ 6, 2020ರಂದು ಆಚರಿಸಲಾಗುತ್ತಿದೆ. ಇವರು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರೂ ಹೌದು. ಡಾ|| ಎಚ್.ಎನ್‌ರವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಸರಳತೆ, ನಿಸ್ವಾರ್ಥತೆ, ದುಡಿಮೆಯಲ್ಲಿನ ಶ್ರದ್ಧೆ ಮುಂತಾದವುಗಳ ಪರಿಚಯ ಇಂದಿನ ಸಮಾಜಕ್ಕೆ ಅಗತ್ಯವಿದೆ. ಇವರ ಜನ್ಮಶತಮಾನೋತ್ಸವ ಅಂಗವಾಗಿ ಕರಾವಿಪ ಇಂದಿನ ಯುವಪೀಳಿಗೆಗೆ ಅವರ ಜೀವನ, ಸಾಧನೆ ಹಾಗೂ ಸಮಾಜಕ್ಕೆ ಅವರು ನೀಡಿದ ಅವಿಸ್ಮರಣೀಯ ಕೊಡುಗೆಗಳನ್ನು ಸ್ಮರಿಸುವ ಒಂದು ಸುವರ್ಣಾವಕಾಶವನ್ನು ಮಾಡಿಕೊಟ್ಟಿದೆ .ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿಜ್ಞಾನಾಸಕ್ತರಿಗಾಗಿ ಲೇಖನ ಸ್ಪರ್ಧೆಯನ್ನು ಆಯೋಜಿಸಿದೆ.

<u>ಲೇಖನ ಬರೆಯಲು ವಿಷಯಗಳು:</u>

ಡಾ|| ಎಚ್.ಎನ್‌ರವರ ವೈಚಾರಿಕತೆ ಮತ್ತು ವಿಚಾರಧಾರೆಗಳ ಪ್ರಸ್ತುತತೆ, ವಿಜ್ಞಾನ ಕಲಿಕೆಯಲ್ಲಿ ವೈಜ್ಞಾನಿಕ ಮನೋಭಾವದ ಪಾತ್ರ, ವಿಜ್ಞಾನ ತಂತ್ರಜ್ಞಾನದ ಪ್ರಗತಿಯಲ್ಲೂ ವೈಜ್ಞಾನಿಕ ಮನೋಭಾವ ಹಿಂದುಳಿಯಲು ಕಾರಣ, ವೈಜ್ಞಾನಿಕ ಮನೋಭಾವದ ಕೊರತೆಯಿಂದ ಆಗುತ್ತಿರುವ ಅನಾಹುತಗಳು, ಡಾ|| ಎಚ್.ಎನ್ ರವರ ಸರಳತೆ ಮತ್ತು ಸಾಮಾಜಿಕ ಚಿಂತನೆ.

<u>ನಿಬಂಧನೆಗಳು</u>

ಲೇಖನಗಳು 750 ಪದಗಳು ಮೀರುವಂತಿರಬಾರದು (ಎ4 ಹಾಳೆಯಲ್ಲಿ). ಲೇಖನಗಳು ಕಡ್ಡಾಯವಾಗಿ ಕನ್ನಡದಲ್ಲಿರಬೇಕು. ಲೇಖನ ಬರೆಯಲು ವಯಸ್ಸಿನ ವಯೋಮಿತಿ 14ರಿಂದ 45ರೊಳಗೆ. ಲೇಖಕರು ತಮ್ಮ ಹೆಸರು, ವಿಳಾಸ, ಮೊಬೈಲ್/ದೂರವಾಣಿ, ಇ-ಮೇಲ್ ಹಾಗೂ ಉದ್ಯೋಗದ ವಿವರಗಳನ್ನು ಕಡ್ಡಾಯವಾಗಿ ನಮೂದಿಸುವುದು, ಪ್ರತಿ ವಿಷಯದ ಅತ್ಯುತ್ತಮ ಐದು ಲೇಖನಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತದೆ. ಲೇಖನಗಳನ್ನು ಕರಾವಿಪ ಕಛೇರಿಗೆ ಕಳುಹಿಸಲು ಕೊನೆಯ ದಿನಾಂಕ 31, ಮೇ 2020. ಲೇಖನಗಳನ್ನು ಕಳಿಸಬೇಕಾದ

ಇಮೇಲ್ ವಿಳಾಸ: krvp.info@gmail.com ಅಥವಾ ವಾಟ್ಸ್‌ಅಪ್ ಸಂಖ್ಯೆ: 9483549159. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 984440528/ 9483549159/9880917831/ 9008442557.

**ನೀರಿನ ಬಿಲ್ ಪಾವತಿಯ** ಹಾಗೂ ಕಾಲರಾ ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿಯ ವತಿಯಿಂದ ಕೈಗೊಂಡ ದೈನಂದಿನ ಕ್ರಮಗಳು

*****

ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಕೊಳವೆಯಲ್ಲಿ ಸೋರುವಿಕೆಯನ್ನು ಸಾರ್ವಜನಿಕರಿಂದ ಅಥವಾ ಮಂಡಳಿಯ ಸಿಬ್ಬಂದಿಯವರು ಗುರುತಿಸಿದ ತಕ್ಷಣ ಸೋರುವಿಕೆ ತಡೆಗಟ್ಟಲು ಕ್ರಮವಹಿಸಲಾಗುತ್ತದೆ. ಇದಲ್ಲದೆ ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ತಕ್ಷಣ ಕ್ರಮವಹಿಸಿ ಕಲುಷಿತ ನೀರು ಸರಬರಾಜು ಕೊಳವೆಗೆ ಸೇರದಂತೆ ಕೂಡಲೇ ಕಾರ್ಯ ಪ್ರವೃತ್ತರಾಗಿ ಕ್ರಮವಹಿಸಲಾಗುತ್ತದೆ. **ಕಾಲರಾ ಮತ್ತು ಜಿ.ಇ**. ಗೆ ಸಂಬಂಧಿಸಿದ ಮಾಹಿತಿಯನ್ನು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಿಂದ ದಿನಾಂಕ 01.05.2020 ರಿಂದ 11.05.2020 ರವರೆಗೆ ನೋಂದಣಿಯಾದ ಪ್ರಕರಣಗಳ ವಿಳಾಸವನ್ನು ಪಡೆದು ಅಂತಹ ಸ್ಥಳಗಳಿಂದ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿ, ಕ್ರೋಢೀಕರಿಸಿದ ಫಲಿತಾಂಶದ ಸಂಪೂರ್ಣ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿರುವುದು. ಫಲಿತಾಂಶದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ದಿನಾಂಕ 01.05.2020 ರಿಂದ 11.05.2020 ರವರೆಗೆ ದಾಖಲುಗೊಂಡ ಒಟ್ಟು 34 ನೀರಿನ ಮಾದರಿಯನ್ನು ಸಂಗ್ರಹಿಸಿದ್ದು, 02 ಮಾದರಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ನೀರು ಸರಬರಾಜು ಇಲ್ಲದಿದ್ದ ಕಾರಣ ನೀರಿನ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ, 27 ಮಾದರಿಗೆ ಸಂಬಂಧಿಸಿದ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, 27 **ಮಾದರಿಗಳ ಫಲಿತಾಂಶವು ಕುಡಿಯಲು ಯೋಗ್ಯವಾಗಿರುತ್ತದೆ**. ಉಳಿದ 05 ಮಾದರಿಗಳಿಗೆ ಸಂಬಂಧಿಸಿದ ಪ್ರದೇಶಗಳು ಜಲ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

**ದಿನಾಂಕ: 12.05.2020 & 13.05.2020 ರಂದು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಿಂದ ಯಾವುದೇ ಕಾಲರಾ ಮತ್ತು ಜಿ.ಇ. ಪ್ರಕರಣಗಳು ದಾಖಲಾಗಿರುವುದಿಲ್ಲ.**

**ನೀರಿನ ಬಿಲ್ ಪಾವತಿಯನ್ನು ಮಂಡಳಿಯ ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿರುತ್ತದೆ ಹಾಗೂ ಮಂಡಳಿಯ ಆ್ಯಪ್ ಆಗಿರುವ "BWSSB Payment App" ಮುಖಾಂತರ Quick Pay ಮಾಡಬಹುದಾಗಿರುತ್ತದೆ. ಮಂಡಳಿಯ ವೆಬ್‌ಸೈಟ್‌ನಲ್ಲಿ "BWSSB Payment App" ನ ಲಿಂಕ್ ಲಭ್ಯವಿದ್ದು, Google Play store ನಲ್ಲಿಯೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆನ್‌ಲೈನ್ ಪೇಮೆಂಟ್ ಸೇವೆಗಳಾದ BBPS(Bharat Bill Payment System)ನಿಂದ ಲಭ್ಯವಿರುವ Paytm, Phone-Pe, Google Pay, ಮುಖಾಂತರವಾಗಿಯೂ ನೀರಿನ ಬಿಲ್ ಪಾವತಿಯನ್ನು ಮಾಡಬಹುದಾಗಿರುತ್ತದೆ. ಅಲ್ಲದೆ ಜಲಮಂಡಳಿ ಕಛೇರಿಗಳ ಆವರಣದಲ್ಲಿರುವ ಕಿಯೋಸ್ಕ್ ಮಿಷನ್‌ಗಳಲ್ಲಿ ಹಾಗೂ ಬೆಂಗಳೂರು ಒನ್ ಸೇವಾ ಕೇಂದ್ರದ ಮುಖಾಂತರವೂ ಸಹ ಹಣ ಪಾವತಿ ಮಾಡಬಹುದಾಗಿರುತ್ತದೆ. ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.**

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ಸಹಾಯವಾಣಿಯ ಸಂಖ್ಯೆ:22238888 ಹಾಗೂ 1916 ಮತ್ತು ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ತಮ್ಮ ಸಮೀಪದ ಸೇವಾಠಾಣೆಯ ದೂರವಾಣಿ ಸಂಖ್ಯೆಯನ್ನು ಮಂಡಳಿಯ ಅಧಿಕೃತ ವೆಬ್‌ಸೈಟ್:www.bwssb.gov.in ನಲ್ಲಿ ಪಡೆಯಬಹುದಾಗಿರುತ್ತದೆ.

**Steps taken to prevent cholera
and water bill payment**

BWSSB immediately take action to stop the leakage as soon as water leakages are detected and reported from public or from staff of BWSSB. Adding to this, if contamination of water is detected it is taken care that contaminated water does not get in contact to the water supply pipe lines. BWSSB collected address of the cases reported about Cholera and GE from Health & Family Welfare Department, Government Epidemic Disease Hospital, Bangalore, 01.05.2020 to 11.05.2020 tested the samples and results of the samples are enclosed with this letter. The abstract of the result is as mentioned below.

Among the 34 cases reported from 01.05.2020 to 11.05.2020, samples from 02 area was not collected since water supply for that area was not on the day when the water sample were collected, samples from 27 area were collected and result of **27 sample was obtained as suitable for potable purpose(SPP**). The areas of remaining 05 cases does not comes under BWSSB limits.

No Cholera and GE cases have been reported from Government Epidemic Disease Hospital on 12.05.2020&13.05.2020.

**All consumers are requested to make payment through the BWSSB official website: www.bwssb.gov.in. BWSSB's App called "BWSSB Payment App" is also available and Quick Pay can be made through this app. Customers can login to the app via the link provided in BWSSB official website and app can also be downloaded from Google pay store. Payment can also be made through online services of BBPS (Bharath Bill Payment System) like Paytm, Phone pe, Google pay etc**. and in Bangalore one and KIOSK Machines at BWSSB Office Premises.

It is also informed that BWSSB Call center number 080-22238888 is available 24/7 to receive the complaint of customers. Along with this, whatsapp number:8762228888 and toll free number 1916 is also available. Service station address and contact details can be obtained through BWSSB official **web site :www.bwssb.gov.in .**